<u>ದಿನಾಂಕ 5 ನೇ ಸೆಪ್ಟೆಂಬರ್ 2023 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.</u>

<u>ಮುಂದುವರಿದ ಪಾಟೀ ಸವಾಲುಃ</u> ಪ್ರತಿವಾದಿಯ ಪರ ವಕೀಲರಿಂದ ಃ

1966 ರಲ್ಲಿ ದಾವಾ ಆಸ್ತಿಗಳಿಗೆ ಸಂಬಂಧಿಸಿದಂತೆ ಪಾಲುಪಟ್ಟಿ ಆಗಿದ್ದು 3 ಭಾಗ ಆಗಿರುತ್ತದೆ. ನಮ್ಮ ಭಾಗದಲ್ಲಿ ನಾನು ಮನೆ ಕಟ್ಟಿರುತ್ತೇನೆ. ನಮ್ಮ ಮನೆಯಲ್ಲಿ ಒಂದು ವರಾಂಡ, ಒಂದು ಹಾಲ್, ಮೂರು ಕೊಠಡಿ, ಒಂದು ಪ್ಯಾಸೇಜ್, ಒಂದು ಅಡಗೆ ಮನೆ, ಒಂದು ಸ್ನಾನದ ಮನೆ, 2 ಶೌಚಾಲಯ, ಮಧ್ಯ ಪ್ಯಾಸೇಜ್ ಇದೆ. ನಮ್ಮ ಪಾಲುಪಟ್ಟಿಯಲ್ಲಿ ಮನೆಯನ್ನು ಎಲ್ಲಿ ಕಟ್ಟಬೇಕು ಎಂಬ ಬಗ್ಗೆ ನಮೂದಾಗಿದೆ. ನಾನು ಕೃಷಿ ಭೂಮಿಯಲ್ಲಿ ಮನೆ ಕಟ್ಟಿದ್ದು ಆಗ ಕೃಷಿಯೇತರ ಚಟುವಟಿಗಳಿಗೆ ಅನುಮತಿ ಕೋರುವ ಅಗತ್ಯತೆ ಇಲ್ಲ ಎನ್ನುತ್ತಾರೆ. ಬಾಣೆ ಜಾಗದಲ್ಲಿ ಮನೆ ಕಟ್ಟಿದ್ದು ಅದು ನನ್ನ ಹೆಸರಿನಲ್ಲಿ ಇದೆ ಎನ್ನುತ್ತಾರೆ.

ದಾವಾ ಸ್ವತ್ತು 5 ಮತ್ತು 6 ನನ್ನ ಪತ್ನಿಗೆ ಸೇರಿದ್ದು, ನಾವು ಸಿ ಆರ್ ಸಿ ಗೆ ಅರ್ಜಿ ಸಲ್ಲಿಸಿದಾಗ ಸಂಬಂಧಪಟ್ಟ ಇಲಾಖೆಯವರು ಆ ರೀತಿ ಸರ್ವೆ ನಂಬರ್ ಅನ್ನು ಬದಲಾಯಿಸಿ ಉಪ ಸಂಖ್ಯೆ ನೀಡುತ್ತಾರೆ ಎನ್ನುತ್ತಾರೆ. ಮೂಲ ಪಾಲುಪಟ್ಟಿಯಲ್ಲಿ ತಮಗೆ ಬಂದ ಆಸ್ತಿಗಳನ್ನು ಯಾರು ಏನು ಬೇಕಾದರೂ ಮಾಡಬಹುದು ಎಂದು ತಿಳಿಸಿದ್ದಾರೆ. ಆದ ಕಾರಣ ನಾನು ಸರ್ವೆ ನಂಬರ್ ಬದಲಾಯಿಸುವಾಗ ಅಕ್ಕಪಕ್ಕದವರಿಗೆ ತಿಳಿಸಿಲ್ಲ ಎನ್ನುತ್ತಾರೆ. ಉಪ ವಿಭಾಗಾಧಿಕಾರಿಗಳ ಸಮಕ್ಷಮ ನಾನು ಸರ್ವೆ ನಂಬರ್ ಗಳಿಗೆ ಉಪ ಸಂಖ್ಯೆ ಬದಲಾಯಿಸಿರುವುದು ಸರಿಯಲ್ಲ ಎಂದು ಆದೇಶ ಆಗಿದೆ ಎಂದರೆ ಸರಿಯಲ್ಲ. ದಾವಾ ಸ್ವತ್ತು 5 ಮತ್ತು 6 ರಲ್ಲಿ ಹಾಗೂ ನಮ್ಮ ಸ್ವತ್ತಿನಲ್ಲಿ ಕಡಂಗ ಬರುವುದಿಲ್ಲ ಎನ್ನುತಾರೆ. ನನ್ನ ಸ್ವತ್ತುಗಳಿಗೆ ಸಂಬಂಧಿಸಿದಂತೆ ನಾನು ರೆವಿನ್ಯೂ ದಾಖಲಾತಿ ಮಾಡಿಕೊಂಡಿದ್ದೇನೆ ಎಂದು ಹೇಳಿರುವುದು ಸತ್ಯ ಸಂಗತಿ ಎನ್ನುತ್ತಾರೆ. ನಾನು ಸುಳ್ಳು ದಾಖಲಾತಿಗಳನ್ನು ನೀಡಿ ಬ್ಯಾಂಕ್ ನಲ್ಲಿ ಸಾಲ ಪಡೆದಿದ್ದೇನೆ ಎಂದರೆ ಸರಿಯಲ್ಲ. ಗುಂಡೂರಾವ್ ನನ್ನ ಪತ್ನಿಗೆ ಆಸ್ತಿಯನ್ನು ಮಾರಾಟ ಮಾಡಿದ್ದರು. ನಾವು ಗುಂಡೂರಾವ್ ರವರ ಬದಲಿಗೆ ಬೇರೆ ವ್ಯಕ್ತಿಯನ್ನು ಕರೆದುಕೊಂಡು ಹೋಗಿ ಕ್ರಯಪತ್ರ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ.

ಪಾಲುಪಟ್ಟಿಯ ಬಗ್ಗೆ ನನಗೆ ಸುಮಾರಾಗಿ ತಿಳಿದಿದೆ ಎನ್ನುತ್ತಾರೆ. ಪಾಲುಪಟ್ಟಿಯಲ್ಲಿ ಪ್ರತಿವಾದಿಯರಿಗೆ ಇಷ್ಟೆ ಬಂದಿರುವ ಬಗ್ಗೆ ನನಗೆ ಮಾಹಿತಿ ಇದೆ. ನಾನು ಸರ್ವೆ ನಂಬರ್ ಬದಲಾಯಿಸಿ ಅನಧೀಕೃತವಾಗಿ ಪ್ರತಿವಾದಿಯರ ಸ್ವತ್ತಿನಲ್ಲಿ ಅತಿಕ್ರಮ ಪ್ರವೇಶ ಮಾಡಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಖ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಗಿರುತ್ತದೆ)

**ಓದಿ ಹೇಳಿ ಕೇಳಿಸಿ ಸರಿ ಇದೆ ಎಂದು ಒಪ್ಪಿದೆ.**

(ಸಾಕ್ಷಿಯವರ ಸಹಿ)

sd/-
ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ.,ಪೊನ್ನಂಪೇಟೆ.